# ನಿಮ್ಮೊಡನೆ

## ಪಠ್ಯದಲ್ಲಿ ಪುರುಷ ಅಡುಗೆ ಮಾಡುವ ಕಥನ ಲಿಂಗಸಮಾನತೆಯತ್ತ ವಿವೇಚನೆಯ ನಡೆ

**ಮಕ್ಕಳಲ್ಲಿ ಲಿಂಗಸಮಾನತೆಯ ಮನೋಭಾವವನ್ನು ಉದ್ದೀಪಿಸುವ ಉದ್ದೇಶದಿಂದ ಕೇರಳ ಸರ್ಕಾರವು ಪುರುಷರು ಅಡುಗೆ ಮಾಡುವ ಹಾಗೂ ಅಡುಗೆ ಕೋಣೆಯಲ್ಲಿ ಕೆಲಸ ಮಾಡುವಂತಹ ಚಿತ್ರಸಹಿತ ಪಾಠವನ್ನು ಪಠ್ಯಪುಸ್ತಕಗಳಲ್ಲಿ ಪರಿಚಯಿಸಿದೆ. ಅಡುಗೆ ಮಹಿಳೆಯರ ಕೆಲಸ ಎಂಬಂಥ ಸಿದ್ಧಮಾದರಿಗಳನ್ನು ಮುರಿಯಲು ಇಂತಹ ಪ್ರಯತ್ನಗಳು ಸಹಕಾರಿ ಆಗಬಲ್ಲವು.**



ಈಶ್ವರ್

ಕುಟುಂಬ ವ್ಯವಸ್ಥೆ ಸೇರಿದಂತೆ ನಮ್ಮ ಎಲ್ಲ ಸಂಸ್ಥೆಗಳ ತಳಪಾಯವು ಪಿತೃಪರ ಚಿಂತನೆಗಳಿಂದಲೇ ರೂಪುಗೊಂಡಿದೆ. ಆದಕಾರಣ, ಲಿಂಗತಾರತಮ್ಯವು ನಮ್ಮ ನಡೆ–ನುಡಿ ಒಳಗೊಂಡಂತೆ ಬದುಕಿನ ಎಲ್ಲ ಆಯಾಮಗಳನ್ನೂ ಆವರಿಸಿಕೊಂಡಿದೆ. ದೈನಂದಿನ ಬದುಕಿನಲ್ಲಿ ನಾವು ಬಳಸುವ ಮಾತುಗಳು ಗಂಡಸರು ಮಾತ್ರ ಸಬಲರೆಂದೂ ಹೆಂಗಸರು ದುರ್ಬಲರೆಂದೂ ನಂಬಿದ ಸಾಮಾಜಿಕ ನೆಲೆಯಿಂದ ಹೊರಬರುತ್ತವೆ. ಅಷ್ಟೇ ಏಕೆ, ಮಹಿಳೆಯರನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಸರ್ಕಾರ ರೂಪಿಸುವ ಹೆಚ್ಚಿನ ಯೋಜನೆಗಳು ಕೂಡ ಸೀರೆ, ತಾಳಿ, ಮದುವೆ, ಮಕ್ಕಳು, ಕುಟುಂಬ ಯೋಜನೆ ಎಂಬಂತಹ ನೆಲೆಗಳಲ್ಲೇ ಗಿರಕಿ ಹೊಡೆಯುತ್ತವೆ.

ಮಹಿಳೆಯರ ಶಿಕ್ಷಣ ಮಟ್ಟ ಮತ್ತು ಆರ್ಥಿಕ ಸ್ಥಿತಿ ಸುಧಾರಿಸಿದೆ. ಸ್ಥಳೀಯ ಸಂಸ್ಥೆಗಳ ಮಟ್ಟಿಗಾದರೂ ಮಹಿಳೆಯರಿಗೆ ಚುನಾವಣೆಯಲ್ಲಿ ಮೀಸಲಾತಿ ದೊರೆತಿದೆ. ಆಧುನಿಕ ಭಾರತವು ಮಹಿಳಾಪರ ಚಳವಳಿಗಳನ್ನೂ ಸ್ತ್ರೀವಾದಿ ಚಿಂತನೆಗಳನ್ನೂ ಕಂಡಿದೆ. ಆದರೂ ಗಂಡಾಳಿಕೆಯ ಭಾಷೆಗೆ ಪೂರ್ಣ ಕಡಿವಾಣ ಹಾಕಲು ಮತ್ತು ಲಿಂಗತಾರತಮ್ಯ ಮನೋಭಾವವನ್ನು ತೊಡೆದುಹಾಕಲು ಸಾಧ್ಯವಾಗಿಲ್ಲ. ಲಿಂಗತ್ವ ಸಂವೇದನೆಯ ಸೂಕ್ಷ್ಮಗಳನ್ನು ಜನಸಾಮಾನ್ಯರಿರಲಿ, ನಮ್ಮನ್ನು ಪ್ರತಿನಿಧಿಸುವ ರಾಜಕೀಯ ನೇತಾರರು ಕೂಡ ಇನ್ನೂ ರೂಢಿಸಿಕೊಂಡಿಲ್ಲ. ಲಿಂಗತಾರತಮ್ಯವನ್ನು ನಿವಾರಿಸಬೇಕಾದ ಜನಪ್ರತಿನಿಧಿಗಳೇ ಲಿಂಗಭೇದವನ್ನು ಉತ್ತೇಜಿಸುವಂತೆ ಮಾತನಾಡುವುದನ್ನು ದೇಶದ ಎಲ್ಲೆಡೆ ಕಾಣಬಹುದು. ಸೀರೆ, ಹೂವು, ಕುಂಕುಮ, ಬಳೆಗಳ ಬಗ್ಗೆ ನಿಕೃಷ್ಟವಾಗಿ ಮಾತನಾಡುವ ಚಾಳಿ ಎಗ್ಗಿಲ್ಲದೆ ಪ್ರಕಟಗೊಳ್ಳುತ್ತದೆ. ಅಂಥವರ ಮೇಲೆ ಅವರು ಪ್ರತಿನಿಧಿಸುವ ಪಕ್ಷ ಕ್ರಮ ಕೈಗೊಂಡ ನಿದರ್ಶನಗಳೂ ಇಲ್ಲ. ಆ ಮಟ್ಟಿಗೆ ಅದು ನಗಣ್ಯ ವಿಷಯವಾಗಿ ಮರೆವಿನ ಅಂಚಿಗೆ ಸರಿಯುತ್ತದೆ.

ಲಿಂಗತ್ವ ಸಂವೇದನೆಯು ಉಪೇಕ್ಷಿಸುವಂಥ ಕ್ಷುಲ್ಲಕ ವಿಷಯವಲ್ಲ. ಮಹಿಳಾ ಸಂವೇದನೆ ಎನ್ನುವುದು ಪ್ರತಿಯೊಬ್ಬರೂ ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕಾದ ನಡವಳಿಕೆ. ಹೆಣ್ಣು–ಗಂಡನ್ನು ಸಮಾನ ಮೌಲ್ಯದ ನೆಲೆಯಲ್ಲಿ ಕಾಣುವಂಥ ಸಾಮಾಜಿಕ ವಾತಾವರಣ ರೂಪಿಸಲು ಬೇಕಾದ ಎಲ್ಲ ಉಪಕ್ರಮಗಳನ್ನು ವ್ಯವಸ್ಥಿತವಾಗಿ ಮತ್ತು ನಿರಂತರವಾಗಿ ಕೈಗೊಳ್ಳುವ ಅಗತ್ಯ ಮತ್ತು ತುರ್ತು ಇದೆ. ಅದಕ್ಕೆ ಮನೆಯೇ ಮೊದಲ ಪಾಠಶಾಲೆ. ಅದರೊಂದಿಗೆ ಶಾಲೆ ಮತ್ತು ಪಠ್ಯಕ್ರಮವೂ ಸೇರಿಕೊಂಡರೆ ಗುರಿ ತಲುಪುವುದು ಕಷ್ಟವೇನೂ ಅಲ್ಲ. ಲಿಂಗಸಮಾನತೆ ಸಾರುವ ಅಂಶಗಳು ಪಠ್ಯಪುಸ್ತಕದ ಭಾಗವಾದರೆ ಅವು ಮಕ್ಕಳ ಮನಸ್ಸಿಗೆ ಸುಲಭವಾಗಿ ನಾಟುತ್ತವೆ, ಚಿರಕಾಲ ನೆನಪಿನಲ್ಲಿ ಉಳಿಯುತ್ತವೆ.

ಈ ದಿಸೆಯಲ್ಲಿ ಕೇರಳ ಸರ್ಕಾರವು ಈಗ ದಿಟ್ಟ ಹೆಜ್ಜೆ ಇರಿಸಿದೆ. ಮಕ್ಕಳಲ್ಲಿ ಲಿಂಗಸಮಾನತೆಯ ಮನೋಭಾವವನ್ನು ಉದ್ದೀಪಿಸುವ ಉದ್ದೇಶದಿಂದ ಅಲ್ಲಿನ ಸರ್ಕಾರವು ಪುರುಷರು ಅಡುಗೆ ಮಾಡುವ ಹಾಗೂ ಅಡುಗೆ ಕೋಣೆಯಲ್ಲಿ ಕೆಲಸ ಮಾಡುವಂತಹ ಚಿತ್ರಸಹಿತ ಪಾಠವನ್ನು ಪಠ್ಯಪುಸ್ತಕಗಳಲ್ಲಿ ಪರಿಚಯಿಸಿದೆ. ಇದು, ಸ್ವಾಗತಾರ್ಹ ನಡೆ. ಮಲಯಾಳ ಮಾಧ್ಯಮ ಶಾಲಾ ಪಠ್ಯಪುಸ್ತಕದಲ್ಲಿ ಪತಿಯು ಅಡುಗೆ ಕೋಣೆಯ ನೆಲದಲ್ಲಿ ಕುಳಿತು ತೆಂಗಿನಕಾಯಿ ತುರಿಯುತ್ತಿರುವ ಚಿತ್ರವಿದ್ದರೆ, ಇಂಗ್ಲಿಷ್ ಮಾಧ್ಯಮ ಪುಸ್ತಕದಲ್ಲಿ ಪತಿಯು ಮಕ್ಕಳಿಗಾಗಿ ತಿಂಡಿ ತಯಾರು ಮಾಡುತ್ತಿರುವ ಚಿತ್ರವಿದೆ. ಅಲ್ಲದೆ, ಮಕ್ಕಳೂ ಸೇರಿದಂತೆ ಕುಟುಂಬದ ಇತರ ಸದಸ್ಯರೂ ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿರುವುದನ್ನು ತೋರಿಸಲಾಗಿದೆ ಎಂದು ವರದಿಯಾಗಿದೆ. ಅಡುಗೆ ಎಂದರೆ ಅದು ಮಹಿಳೆಯರ ಕೆಲಸ ಎಂಬಂಥ ಸಿದ್ಧಮಾದರಿಗಳನ್ನು ಮುರಿಯಲು ಇಂತಹ ಪ್ರಯತ್ನಗಳು ಸಹಕಾರಿ ಆಗಬಲ್ಲವು. ರುಚಿಕಟ್ಟಾಗಿ ಅಡುಗೆ ಮಾಡುವುದು ಕೂಡ ಒಂದು ಕಲೆ. ಅದಕ್ಕೆ ಲಿಂಗಭೇದ ಇಲ್ಲ. ಮೇಲು–ಕೀಳಿನ ಹಣೆಪಟ್ಟಿ ಅಂಟಿಸುವುದಂತೂ ಅಕ್ಷಮ್ಯ.

ಪಠ್ಯಪುಸ್ತಕ ಪರಿಷ್ಕರಣೆಯು ಕರ್ನಾಟಕದಲ್ಲಿ ಅನಗತ್ಯ ಗೊಂದಲಕ್ಕೆ ಮತ್ತು ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿತ್ತು. ಶಿಕ್ಷಣ ಕ್ಷೇತ್ರದ ವರ್ಚಸ್ಸಿಗೂ ಧಕ್ಕೆ ತಂದಿತ್ತು. ಪಠ್ಯಗಳು ಮಕ್ಕಳ ಮನಸ್ಸನ್ನು ಹದಗೊಳಿಸುವ, ಮುದಗೊಳಿಸುವ ಕೆಲಸವನ್ನು ಮಾಡಬೇಕು. ಕತೆ, ಕವಿತೆಗಳು ಲವಲವಿಕೆ ತುಂಬಬಲ್ಲವು. ಚರಿತ್ರೆಯ ಪಾಠಗಳು ಹುಮ್ಮಸ್ಸು ಮೂಡಿಸಬಲ್ಲವು. ಪಠ್ಯ ರೂಪಿಸುವ ಮನಸ್ಸುಗಳಿಗೆ ಅದರ ಉತ್ತಮ ಪರಿಣಾಮಗಳ ಬಗ್ಗೆ ಹೆಚ್ಚು ಗಮನವಿರಬೇಕು ಮತ್ತು ಅದೇ ಮುಖ್ಯವಾಗಬೇಕು. ಮಕ್ಕಳಲ್ಲಿ ಉತ್ತಮ ಅಭಿರುಚಿಯನ್ನು ಬೆಳೆಸುವಂತಿರಬೇಕು, ಭೇದಭಾವಗಳನ್ನು ತೊಡೆಯುವಂತಿರಬೇಕು. ಸಾಮಾಜಿಕ ತಾರತಮ್ಯ ಹಾಗೂ ಸಾಂಸ್ಕೃತಿಕ ಪೂರ್ವಗ್ರಹಗಳ ನಿವಾರಣೆಗೆ ನೆರವಾಗುವಂತಿರಬೇಕು. ಕುತೂಹಲಕರ, ಮೈ–ಮನಗಳ ಆರೋಗ್ಯಕ್ಕೆ ಸಂಬಂಧಿಸಿದ ಪಾಠಗಳಿರಬೇಕು. ಮಕ್ಕಳಲ್ಲಿ ವಿಮರ್ಶಾ ಪ್ರಜ್ಞೆಯನ್ನು, ಸಮಾನತೆಯ ಪ್ರಜ್ಞೆಯನ್ನು, ಉದಾರ ಮನೋಭಾವವನ್ನು ಬೆಳೆಸುವಂತಿರಬೇಕು. ಓದುವ, ಬರೆಯುವ ಆಸೆ ಚಿಗುರಿಸುವಂತಿರಬೇಕು. ಪಠ್ಯಪುಸ್ತಕಗಳು ಮಕ್ಕಳ ವ್ಯಕ್ತಿತ್ವ ರೂಪಿಸುವ ಅಕ್ಷರದೀಪಗಳಾಗಿಯೇ ಉಳಿಯಲಿ.

■ ಎನ್. ಉದಯಕುಮಾರ್